CCE RF/PF/RR/PR/NSR/NSPR(A)/666/038

**A**

**ಮಾರ್ಚ್/ಏಪ್ರಿಲ್ 2024 ರ ಪರೀಕ್ಷೆ – 1**

**MARCH/APRIL 2024 EXAMINATION-1**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RF/PF/RR/PR/NSR/NSPR**
**FULL SYLLABUS**

Question Paper Serial No.

**ಸಂಕೇತ ಸಂಖ್ಯೆ : 95-K**
**Code No. : 95-K**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Fresh / Private Fresh / Regular Repeater / Private Repeater / NSR / NSPR)**

ದಿನಾಂಕ : 02. 04. 2024 ] [ Date : 02. 04. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ***ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**02. 04. 2024**

**Tear here**

SOCIOLOGY

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಡಾ. ರಾಜ್‌ಕುಮಾರ್‌ರವರ ಚಲನಚಿತ್ರಗಳನ್ನು ನೋಡಿದ್ದರಿಂದಾದ ಪರಿಣಾಮ

   (A) ಆದಾಯ ಹೆಚ್ಚಾಯಿತು

   (B) ನೇತ್ರದಾನ ಹೆಚ್ಚಾಯಿತು

   (C) ದೂರದರ್ಶನ ಚಾನೆಲ್‌ಗಳು ಹೆಚ್ಚಾದವು

   (D) ಸಮೂಹ ಮಾಧ್ಯಮ ನೀತಿ ಜಾರಿಗೆ ಬಂದಿತು

2. ಹೋಂ ರೂಲ್ ಚಳವಳಿಯು ಮೊದಲಿಗಿಂತ ಹತ್ತರಷ್ಟು ಬಲವಾಯಿತು. ಏಕೆಂದರೆ,

   (A) ಮಹಿಳೆಯರ ಭಾಗವಹಿಸುವಿಕೆ

   (B) ಮೊದಲ ದುಂಡು ಮೇಜಿನ ಸಭೆಯ ವಿಫಲತೆ

   (C) ಗಾಂಧೀಜಿಯವರ ಸತ್ಯಾಗ್ರಹ

   (D) ಅರಬಿಂದೋ ಘೋಷ್‌ರವರ ಭಾಗವಹಿಸುವಿಕೆ

3. ವಲಸೆಯು ಹೆಚ್ಚಾಗಲು ಕಾರಣ

(A) ಪ್ರಾದೇಶಿಕ ಅಸಮತೋಲನ

(B) ಅರಣ್ಯೀಕರಣ

(C) ಮೂಢನಂಬಿಕೆಗಳು

(D) ವಿವಾಹ

4. 18 ನೇ ಶತಮಾನದ ಯೂರೋಪ್ ಖಂಡದ ರಾಷ್ಟ್ರೀಯತೆಯ ಚಳವಳಿಗಳು ಇದರಿಂದ ಪ್ರೇರಣೆ ಹೊಂದಿದ್ದವು

(A) ರಷ್ಯಾದ ಕ್ರಾಂತಿ

(B) ಫ್ರಾನ್ಸಿನ ಮಹಾಕ್ರಾಂತಿ

(C) ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

(D) ಸೂಯೆಜ್ ಕಾಲುವೆ ಬಿಕ್ಕಟ್ಟು

5. ಅನಿಯೋಜಿತ ಬದಲಾವಣೆಗೆ ಒಂದು ಉದಾಹರಣೆ

(A) ಧರ್ಮ

(B) ಅಣೆಕಟ್ಟು ನಿರ್ಮಾಣ

(C) ಅನಾವೃಷ್ಟಿ

(D) ಸಾಮಾಜಿಕ ಅರಣ್ಯ

6. ಬುಡಕಟ್ಟು ಸಮುದಾಯವನ್ನು 'ಗಿರಿಜನರು' ಎಂದು ಕರೆದವರು

(A) ಮಹಾತ್ಮ ಗಾಂಧೀಜಿ

(B) ಮಹರ್ಷಿ ಕರ್ವೆ

(C) ಡಾ. ಬಿ.ಆರ್. ಅಂಬೇಡ್ಕರ್

(D) ದಯಾನಂದ ಸರಸ್ವತಿ

7. ಕರ್ನಲ್ ಲಕ್ಷ್ಮೀ ಈ ಸೇನೆಯ ಮಹಿಳಾ ಘಟಕದ ನಾಯಕಿಯಾಗಿದ್ದರು

(A) ರಾಯಲ್ ವಾಯುಸೇನೆ

(B) ಪ್ರಜಾಸೇನೆ

(C) ಕರ್ನಾಟ ಬಲ

(D) ಭಾರತೀಯ ರಾಷ್ಟ್ರೀಯ ಸೇನೆ

8. 'ಕ್ಯಾಸ್ಟ್'ದ ಅರ್ಥವೇನೆಂದರೆ

(A) ತಳಿ

(B) ವಿವಾಹದ ಒಂದು ವಿಧ

(C) ಸಂಪ್ರದಾಯ

(D) ಪ್ರಾಂತ್ಯ

9. ಸಾಮಾಜಿಕ ಬದಲಾವಣೆಗಿರುವ ದೊಡ್ಡ ಅಡ್ಡಿ ಆತಂಕವೆಂದರೆ

(A) ಶಿಕ್ಷಣ

(B) ಸಮುದಾಯ

(C) ಅಸ್ಪೃಶ್ಯತೆ

(D) ವಿವಾಹ

10. ರಷ್ಯಾದ ಜನರು ಇವರ ಸಿದ್ಧಾಂತದಿಂದ ಪ್ರಭಾವಿತರಾಗಿದ್ದರು

(A) ಅಬ್ರಹಾಂ ಲಿಂಕನ್

(B) ಕಾರ್ಲ್ ಮಾರ್ಕ್ಸ್

(C) ಅಡಾಲ್ಫ್ ಹಿಟ್ಲರ್

(D) ನೆಪೋಲಿಯನ್

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

**5 × 1 = 5**

| ***A*-ಪಟ್ಟಿ** | | ***B*-ಪಟ್ಟಿ** | |
|---|---|---|---|
| (A) | ದಯಾನಂದ ಸರಸ್ವತಿ | (i) | ಸತ್ಯಶೋಧಕ ಸಮಾಜ |
| (B) | ಜ್ಯೋತಿರಾವ್ ಫುಲೆ | (ii) | ಆರ್ಯ ಸಮಾಜ |
| (C) | ರಾಜಾ ರಾಮ್‌ಮೋಹನ್ ರಾಯ್ | (iii) | ಪ್ರಾರ್ಥನಾ ಸಮಾಜ |
| (D) | ಆತ್ಮರಾಮ ಪಾಂಡುರಂಗ | (iv) | ಬ್ರಹ್ಮ ಸಮಾಜ |
| (E) | ಸರ್ದಾರ್ ವಲ್ಲಭಭಾಯಿ ಪಟೇಲ್ | (v) | ಚಂಪಾರಣ್ಯ ಸತ್ಯಾಗ್ರಹ |
| | | (vi) | ಬಾರ್ದೋಲಿ ಸತ್ಯಾಗ್ರಹ |
| | | (vii) | ಆಲಿಘರ್ ಚಳವಳಿ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪದ / ವಾಕ್ಯದಲ್ಲಿ ಉತ್ತರ ಬರೆಯಿರಿ : 15 × 1 = 15**

12. ಸಾಮಾಜಿಕ ಬದಲಾವಣೆ ಎಂದರೇನು ?

13. ಪ್ರಾದೇಶಿಕ ಅಸಮತೋಲನ ಎಂದರೇನು ?

14. ಪ್ರಗತಿ ಮತ್ತು ಸಾಮಾಜಿಕ ಬದಲಾವಣೆ ವಿಳಂಬವಾಗಲು ಕಾರಣವೇನು ?

15. ಆಧುನಿಕರಣದ ಮುಖ್ಯ ಗುರಿಯನ್ನು ತಿಳಿಸಿ.

16. ವಿಶೇಷ ವಿವಾಹ ಕಾಯ್ದೆ ( 1872 ) ಯನ್ನು ಏಕೆ ಜಾರಿಗೆ ತರಲಾಯಿತು ?

17. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕವನ್ನು ಬರೆದವರು ಯಾರು ?

18. 1950 ರ ಆರ್ಥಿಕ ಯೋಜನಾನೀತಿಯ ಮುಖ್ಯ ಗುರಿಯನ್ನು ತಿಳಿಸಿ.

19. ಸಾಮಾಜಿಕ ಚಳವಳಿಗಳ ಬಗ್ಗೆ ಹರ್ಬರ್ಟ್ ಬ್ಲೂಮರ್‌ರವರ ವ್ಯಾಖ್ಯಾನವೇನು ?

20. ರಷ್ಯಾದಲ್ಲಿ ರೈತರು ಕ್ರಾಂತಿಕಾರಿ ಚಳವಳಿಯನ್ನು ಆಯೋಜಿಸಿದರು ?

21. 'ಸಿಲಿಕಾನ್ ವ್ಯಾಲಿ' ಎಂದು ಯಾವ ನಗರ ಪ್ರಸಿದ್ಧವಾಗಿದೆ ?

22. ಆದಿವಾಸಿಗಳನ್ನು 'ಪರಿಶಿಷ್ಟ ಬುಡಕಟ್ಟು'ಗಳೆಂದು ಸೂಚಿಸಿರುವ ನಮ್ಮ ಸಂವಿಧಾನದ ವಿಧಿಯನ್ನು ಹೆಸರಿಸಿ.

23. ಭಾರತದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಬೆಂಬಲ ನೀಡಿದ ಬ್ರಿಟಿಷ್ ವೈಸರಾಯ್ ಯಾರು ?

24. ಸಾಂಪ್ರದಾಯಿಕ ವಿವಾಹ ಪದ್ಧತಿಯಲ್ಲಿ ಬದಲಾವಣೆ ಉಂಟಾಗಲು ಕಾರಣವೇನು ?

25. ವೇದಗಳ ಕಾಲದ ಮಹಿಳಾ ವಿದ್ವಾಂಸರನ್ನು ಹೆಸರಿಸಿ.

26. ಎಸ್.ಎಫ್. ನಾಡಲ್‌ರವರು 'ಬುಡಕಟ್ಟು' ಪದಕ್ಕೆ ನೀಡಿರುವ ಅಭಿಪ್ರಾಯವನ್ನು ತಿಳಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಆಧುನೀಕರಣಕ್ಕೆ ಪ್ರಮುಖ ಕಾರಣಗಳೇನು ?

28. ಕೈಗಾರಿಕೀಕರಣದ ಪರಿಣಾಮಗಳಾವುವು ?

29. ಕಚ್ಚಾ ಆಹಾರ ಪಕ್ಕಾ ಆಹಾರಕ್ಕಿಂತ ಭಿನ್ನವಾಗಿದೆ. ಹೇಗೆ ?

30. 1992ರ ನಂತರ ಆರ್ಥಿಕ ಅಸಮತೋಲನ ಹೆಚ್ಚಾಗಲು ಕಾರಣವೇನು ?

31. ಸಾಂಪ್ರದಾಯಿಕ ಮನಃಸ್ಥಿತಿಯ ಜನರು ಸಾಮಾನ್ಯವಾಗಿ ಯಾವ ಅಂಶಗಳನ್ನು ಗೌರವಿಸುತ್ತಾರೆ ?

32. ಗಾಂಧೀಜಿಯವರ ನೇತೃತ್ವದಲ್ಲಿ ಜರುಗಿದ ಸತ್ಯಾಗ್ರಹಗಳನ್ನು ತಿಳಿಸಿ.

33. ಜಾತಿ ಪದ್ಧತಿಯ ಕಾರ್ಯಾಚರಣೆಯನ್ನು ನಿಯಂತ್ರಿಸಲು ಲಭ್ಯವಿರುವ ವ್ಯವಸ್ಥೆಗಳನ್ನು ಹೆಸರಿಸಿ.

34. ಬುಡಕಟ್ಟುಗಳ ಬದಲಾವಣೆಯಲ್ಲಿ ಸರ್ಕಾರದ ಪಾತ್ರವೇನು ?

35. ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಸಮುದಾಯಕ್ಕೆ ಒದಗಿಸಲಾದ ಸೌಲಭ್ಯಗಳಾವುವು ?

36. ಸಾಮಾಜಿಕ ಸುಧಾರಣಾ ಚಳುವಳಿಗಳಲ್ಲಿ ಬಳಸಿದ ವಿಧಾನಗಳನ್ನು ವಿವರಿಸಿ.

37. ಮಹಿಳೆಯರ ಜಾಗೃತಿ ಮತ್ತು ಪ್ರಗತಿಗಾಗಿ ಬ್ರಿಟಿಷರ ಕಾಲದಲ್ಲಿ ಪ್ರಮುಖ ಪಾತ್ರವಹಿಸಿದ ಮಹಿಳಾ ಸಂಘಟನೆಗಳಾವುವು ?

38. ಮಹಿಳಾ ಸಬಲೀಕರಣಕ್ಕೆ ಕಾರಣಗಳಾವುವು ?

39. ಸಮಾಜವು ಸಾಮಾಜಿಕ ಬದಲಾವಣೆಯನ್ನು ಏಕೆ ಅಪೇಕ್ಷಿಸುವುದಿಲ್ಲ ?

40. ದುರ್ಬಲ ವರ್ಗದವರಲ್ಲಿ ಜಾಗೃತಿ ಮೂಡಿಸುವಲ್ಲಿ ಶಿಕ್ಷಣದ ಪಾತ್ರವೇನು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. "ವಿಜ್ಞಾನ ಮತ್ತು ತಂತ್ರಜ್ಞಾನ ಸಾಮಾಜಿಕ ಬದಲಾವಣೆಯನ್ನು ತರುವುದು." - ಈ ಹೇಳಿಕೆಯನ್ನು ವಿಶ್ಲೇಷಿಸಿ.

42. ಸಾಮಾಜಿಕ ಚಳವಳಿಗಳ ಉದ್ದೇಶಗಳನ್ನು ಹೆಸರಿಸಿ.

43. ವಿವಾಹಕ್ಕೆ ಸಂಬಂಧಿಸಿದ ಕಾನೂನುಗಳನ್ನು ಪಟ್ಟಿಮಾಡಿ.

44. ಅನಕ್ಷರತೆಯು ಸಾಮಾಜಿಕ ಬದಲಾವಣೆಗೆ ಅಡ್ಡಿ ಆತಂಕವಾಗಿದೆ. ಹೇಗೆ ?

45. ಗಣಕಯಂತ್ರದ ಉಪಯುಕ್ತತೆಗಳನ್ನು ತಿಳಿಸಿ.

46. ಜಾತಿ ಪದ್ಧತಿಯನ್ನು ವಿರೋಧಿಸಿ ಭಾರತದಲ್ಲಿ ಸ್ಥಾಪನೆಯಾದ ಪ್ರಮುಖ ಧರ್ಮಗಳಾವುವು ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

47. ಭಾರತದಲ್ಲಿ ಬುಡಕಟ್ಟು ಸಮಿತಿಯ ಕಾರ್ಯಗಳಾವುವು ?

DO NOT WRITE ANYTHING HERE